ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂ:ಸಿ-2/ಆಡಳಿತ/LAQ-2001/2024-25 ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ
ರಸ್ತೆ, ಬೆಂಗಳೂರು
ದಿನಾಂಕ:
07.2024

ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,

ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ

ಬೆಂಗಳೂರು- 01

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭೆ ಸದಸ್ಯರಾದ ರೇವಣ್ಣ ಹೆಚ್‌ .
ಡಿ
(ಹೊಳೇನರಸೀಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ
ಸಂಖ್ಯೆ:2001 ಕ್ಕೆ
ಉತ್ತರವನ್ನು ಸಲ್ಲಿಸುವ ಬಗ್ಗೆ.
*****

ಮಾನ್ಯ ವಿಧಾನಸಭೆ ಸದಸ್ಯರಾದ ರೇವಣ್ಣ ಹೆಚ್‌. ಡಿ (ಹೊಳೇನರಸೀಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2001 ಕ್ಕೆ ಉತ್ತರವನ್ನು ಸಿದ್ದಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಕೃಷಿ
ನಿರ್ದೇಶಕರು

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2001
2. ಸದಸ್ಯರ ಹೆಸರು : ರೇವಣ್ಣ ಹೆಚ್ . ಡಿ (ಹೊಳೇನರಸೀಪುರ)
3. ವಿಷಯ: ಹುದ್ದೆಗಳ ಭರ್ತಿ .
4. ಉತ್ತರಿಸಬೇಕಾದ ದಿನಾಂಕ : 24.07.2024.
5. ಉತ್ತರಿಸಬೇಕಾದವರು : ಮಾನ್ಯ ಕೃಷಿ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಸಹಾಯಕ ಕೃಷಿ ಅಧಿಕಾರಿಗಳು , ಕೃಷಿ ಅಧಿಕಾರಿಗಳು ಹಾಗೂ ಇತರೆ ಹುದ್ದೆಗಳು ಹಲವಾರು ವರ್ಷಗಳಿಂದ ಖಾಲಿ ಇರುವುದರಿಂದ ರೈತರ ಕೆಲಸ ಕಾರ್ಯಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಹುದ್ದೆಗಳ ಸಂಪೂರ್ಣ ಮಾಹಿತಿ ನೀಡುವುದು)</td><td>ಕೃಷಿ ಇಲಾಖೆಯಲ್ಲಿ ಸಹಾಯಕ ಕೃಷಿ ಅಧಿಕಾರಿಗಳು , ಕೃಷಿ ಅಧಿಕಾರಿಗಳು ಹಾಗೂ ಇತರೆ ಹುದ್ದೆಗಳು ಹಲವಾರು ವರ್ಷಗಳಿಂದ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ .
(ಜಿಲ್ಲಾವಾರು , ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ)</td></tr>
<tr><td>ಆ</td><td>ಹಾಗಿದ್ದಲ್ಲಿ , ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಇದುವರೆಗೆ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿಗಳ ದಾಖಲಾತಿಗಳನ್ನು ನೀಡುವುದು)</td><td>i) ಸರ್ಕಾರದ ಪತ್ರ ಸಂಖ್ಯೆ : AGRI/245/AGS/2024, ದಿನಾಂಕ 06.02.2024 ರಲ್ಲಿ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ವೃಂದದಲ್ಲಿ ಕೆಳಕಂಡಂತೆ ನೇರ ನೇಮಕಾತಿ ಕೋಟಾದಡಿ ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಅನುಮತಿ ನೀಡಲಾಗಿದ್ದು , ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ .<table><tr><th>ವೃಂದಗಳು</th><th>ಹುದ್ದೆಗಳ ಸಂಖ್ಯೆ</th></tr><tr><td>ಕೃಷಿ ಅಧಿಕಾರಿ</td><td>118</td></tr><tr><td>ಸಹಾಯಕ ಕೃಷಿ ಅಧಿಕಾರಿ</td><td>809</td></tr><tr><td>ಒಟ್ಟು</td><td>927</td></tr></table>ii) ಕಲ್ಯಾಣ ಕರ್ನಾಟಕ ವೃಂದದಡಿ ನೇರ ನೇಮಕಾತಿ ಕೋಟಾದಲ್ಲಿ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಅನುಮೋದನೆ ನೀಡಿದ್ದು ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ .<table><tr><th>ವೃಂದ</th><th>ಹುದ್ದೆಗಳ ಸಂಖ್ಯೆ</th></tr><tr><td>ಕೃಷಿ ಅಧಿಕಾರಿ</td><td>18</td></tr><tr><td>ಸಹಾಯಕ ಕೃಷಿ ಅಧಿಕಾರಿ</td><td>159</td></tr><tr><td>ಬೆರಳಚ್ಚುಗಾರರು</td><td>17</td></tr><tr><td>ದ್ವಿತೀಯ ದರ್ಜೆ</td><td>17</td></tr></table></td></tr>
</table>

		ಸಹಾಯಕರು | ಒಟ್ಟು | **211** Iii) ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ಉಳಿಕೆ ಮೂಲ ವೃಂದದಡಿ- 42 ಮತ್ತು ಕಲ್ಯಾಣ ಕರ್ನಾಟಕ ವೃಂದದಡಿ - 19 ಹುದ್ದೆಗಳು ಒಟ್ಟು 61 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಹಿಸಲಾಗಿದೆ . ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಲ್ಲಿ ಉಳಿಕೆ ವೃಂದದಡಿ 53 ಹುದ್ದೆಗಳನ್ನು ಮತ್ತು ಕಲ್ಯಾಣ ಕರ್ನಾಟಕ ವೃಂದದಡಿ 12 ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಹಾಗೂ ಮುಂಬಡ್ತಿ ಕೋಟಾದಡಿ ಖಾಲಿ ಇರುವ ಎಲ್ಲಾ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ .
ಇ	ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ಕೃಷಿ ಇಲಾಖೆಗೆ ಎಸ್ . ಎಂ. ಎ. ಎಂ. ಕೃಷಿ ಯಾಂತ್ರೀಕರಣ , ಪಿ .ಎಂ. ಕೆ .ಎಸ್.ವೈ. ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ಹಾಗೂ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಹಾಗೂ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ನೀಡಿರುವ ಅನುದಾನವೆಷ್ಟು ; ಈ ಅನುದಾನದಲ್ಲಿ ಖರ್ಚು ಮಾಡಿರುವ ಮೊತ್ತವೆಷ್ಟು ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಹುದ್ದೆಗಳ ಸಂಪೂರ್ಣ ಮಾಹಿತಿ ನೀಡುವುದು)	i) ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ಕೃಷಿ ಇಲಾಖೆಗೆ ಎಸ್.ಎಂ.ಎ.ಎಂ., ಕೃಷಿ ಯಾಂತ್ರೀಕರಣ , ಪಿ .ಎಂ.ಕೆ .ಎಸ್.ವೈ. ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ಹಾಗೂ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಹಾಗೂ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ನೀಡಿರುವ ಅನುದಾನ ಹಾಗೂ ಈ ಅನುದಾನದಲ್ಲಿ ಖರ್ಚು ಮಾಡಿರುವ ಮೊತ್ತದ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ಮಾಹಿತಿಯನ್ನು ಅನುಬಂಧ 2 ರಲ್ಲಿ ನೀಡಲಾಗಿದೆ . ii) ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ಕೃಷಿ ಇಲಾಖೆಗೆ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ 2401-00-102-0-08 ಲೆಕ್ಕಶೀರ್ಷಿಕೆಯಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ನೀಡಿರುವ ಅನುದಾನ ಹಾಗೂ ಈ ಅನುದಾನದಲ್ಲಿ ಖರ್ಚು ಮಾಡಿರುವ ಮೊತ್ತದ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ಮಾಹಿತಿಯನ್ನು ಅನುಬಂಧ 3 ರಲ್ಲಿ ನೀಡಲಾಗಿದೆ .
ಈ	ಬೇಸಿಗೆಯಲ್ಲಿ ಅಥವಾ ಆಕಸ್ಮಿಕವಾಗಿ ರೈತರ ಹುಲ್ಲಿನ ಬವಣೆಗೆ ಬೆಂಕಿ ಬಿದ್ದಲ್ಲಿ ಕಳುರಹಿತವಾದ ಹುಲ್ಲು ಒಂದು ಎಕರೆಗೆ ಸುಮಾರು 3-4 ನಷ್ಟವಾಗುತ್ತಿದ್ದು , ರೈತರಿಗೆ ಸುಮಾರು 30 ರಿಂದ 40 ಸಾವಿರ ರೂ.ಗಳು ನಷ್ಟವಾಗುತ್ತಿದ್ದು , ಪರಿಹಾರವಾಗಿ ಕೇವಲ ರೂ. 1000 ಮಾತ್ರ ಸರ್ಕಾರದಿಂದ ರೈತರಿಗೆ	ಬೇಸಿಗೆಯಲ್ಲಿ ಅಥವಾ ಆಕಸ್ಮಿಕವಾಗಿ ರೈತರ ಹುಲ್ಲಿನ ಬಣವೆಗೆ ಬೆಂಕಿ ಬಿದ್ದಲ್ಲಿ ಮಾರ್ಗಸೂಚಿಯನ್ವಯ ಈ ಕೆಳಕಂಡಂತೆ ಕಂದಾಯ ಇಲಾಖೆಯಿಂದ ಪರಿಹಾರ ನೀಡಲಾಗುವುದು.

<table>
<tr>
<td></td>
<td>ನೀಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಹೆಚ್ಚಿನ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ ; (ಸಂಪೂರ್ಣ ಮಾಹಿತಿ ನೀಡುವುದು)</td>
<td>
<table>
<tr><th>ಕ್ರ ಸಂ</th><th>ಬೆಳೆಯ ಹೆಸರು</th><th>ಬೆಳೆಯ ವಿಸ್ತೀರ್ಣ (ಎಕರೆಗಳಲ್ಲಿ)</th><th>ಕಾಳು ಸಮೇತ ಹುಲ್ಲು ಪರಿಹಾರ (ರೂ ಗಳಲ್ಲಿ)</th><th>ಕಾಳು ರಹಿತ ಹುಲ್ಲು ಪರಿಹಾರ (ರೂ ಗಳಲ್ಲಿ)</th></tr>
<tr><td rowspan="4">1</td><td rowspan="4">ಏಕದಳ ಧಾನ್ಯ</td><td>1 ರ ವರೆಗೆ</td><td>4000-5000</td><td>800-1000</td></tr>
<tr><td>1-2</td><td>8000-10000</td><td>1600-2000</td></tr>
<tr><td>2-3</td><td>12000-15000</td><td>2400-3000</td></tr>
<tr><td>3 ಕ್ಕೂ ಮೇಲ್ಪಟ್ಟು</td><td>16000-20000</td><td>3200-4000</td></tr>
<tr><td rowspan="3">2</td><td rowspan="3">ದ್ವಿದಳ ಧಾನ್ಯ</td><td>1 ವರೆಗೆ</td><td>6000-7000</td><td>1000-1200</td></tr>
<tr><td>1-2</td><td>12000-14000</td><td>2000-2400</td></tr>
<tr><td>2 ಕ್ಕೂ ಮೇಲ್ಪಟ್ಟು</td><td>18000-20000</td><td>3000-4000</td></tr>
<tr><td rowspan="2">3</td><td rowspan="2">ಎಣ್ಣೆ ಕಾಳು</td><td>1 ರ ವರೆಗೆ</td><td>8000-10000</td><td>1600-2000</td></tr>
<tr><td>1 ಕ್ಕೂ ಮೇಲ್ಪಟ್ಟು</td><td>16000-20000</td><td>3200-4000</td></tr>
</table>
ಮೇಲೆ ತಿಳಿಸಿರುವ ಬೆಳೆಗಳಲ್ಲದೆ ಇತರೆ ಬೆಳೆಗಳು ನಷ್ಟವಾದಲ್ಲಿ ಸಮಿತಿಯು ಪರಿಶೀಲಿಸಿ ಗರಿಷ್ಠ ಮಿತಿಯೊಳಗೆ (ರೂ.20,000/-) ನಿರ್ಣಯ ಕೈಗೊಳ್ಳುವುದು .

ಹೆಚ್ಚಿನ ಪರಿಹಾರ ನೀಡುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ .
</td>
</tr>
<tr>
<td>ಉ</td>
<td>ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 8 ಹೋಬಳಿಗಳಲ್ಲಿ ಕೃಷಿ ಕಟಾವಿಗೆ ಕೃಷಿ ಕಾರ್ಮಿಕರ ಸಮಸ್ಯೆಯನ್ನು ಎದುರಿಸುತ್ತಿದ್ದು , ಕೊಯ್ಲಿಗೆ ಕೃಷಿ ಇಲಾಖೆ ವತಿಯಿಂದ ಯಂತ್ರೋಪಕರಣಗಳನ್ನು</td>
<td>ಕೊಯ್ಲಿಗೆ ಕೃಷಿ ಇಲಾಖೆ ವತಿಯಿಂದ ಯಂತ್ರೋಪಕರಣಗಳನ್ನು ಸಬ್ಸಿಡಿ ದರದಲ್ಲಿ ರೈತರಿಗೆ ನೀಡಲಾಗುತ್ತಿದೆ . ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 5 ಕೃಷಿ ಇಲಾಖೆ ವತಿಯಿಂದ ಬೆಳೆ ಕಟಾವಿಗೆ ರೀಪರ್ , ಬಹುಬೆಳೆ ಒಕ್ಕಣೆ ಯಂತ್ರ (ಮಲ್ಟಿ ಕ್ರಾಪ್ ಥ್ರೆಷರ್), ಹಾರ್ವೆಸ್ಟ ಸಾಮಾನ್ಯ ವರ್ಗದ ರೈತರಿಗೆ ಶೇ .50 ಹಾಗೂ ಪರಿಶಿಷ್ಟ ಜಾತಿ /ಪರಿಶಿಷ್ಟ ವರ್ಗದ ರೈತರಿಗೆ ಶೇ.90 ರ ಸಬ್ಸಿಡಿಯನ್ನು ಗರಿಷ್ಠ ರೂ.1.00 ಲಕ್ಷಕ್ಕೆ ಮಿತಿಗೊಳಿಸಿ ನೀಡಲಾಗುತ್ತದೆ .</td>
</tr>
</table>

<table>
<tr>
<td></td>
<td>ಸಬ್ಸಿಡಿ ದರದಲ್ಲಿ ರೈತರಿಗೆ ನೀಡಲಾಗುತ್ತಿದೆಯೇ ; ಯಾವ ಯಾವ ಯಂತ್ರೋಪಕರಣಗಳನ್ನು ಸಬ್ಸಿಡಿ ದರದಲ್ಲಿ ನೀಡಲಾಗುತ್ತಿದೆ ; (ಸಂಪೂರ್ಣ ಮಾಹಿತಿ ನೀಡುವುದು)</td>
<td></td>
</tr>
<tr>
<td>ಊ</td>
<td>ಹೊಳೆನರಸೀಪುರ ತಾಲ್ಲೂಕಿನ ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಬಾಡಿಗೆ ಆಧಾರಿತ ಕೃಷಿ ಯಂತ್ರಧಾರೆ ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)</td>
<td>ಹೊಳೆನರಸೀಪುರ ತಾಲ್ಲೂಕು ಕಸಬಾ ಹೋಬಳಿ ವ್ಯಾಪ್ತಿಯಲ್ಲಿನ ಬಾಡಿಗೆ ಆಧಾರಿತ ಕೃಷಿ ಯಂತ್ರಧಾರೆ ಕೇಂದ್ರವು ಮಹೀಂದ್ರ & ಮಹೀಂದ್ರ (ಸ್ವರಾಜ್) ಸಂಸ್ಥೆಯ ಸಹಯೋಗದೊಂದಿಗೆ ತೆರೆಯಲಾಗಿರುತ್ತದೆ . ಸದರಿ ಸಂಸ್ಥೆಯು ಇಲಾಖೆಯೊಂದಿಗೆ ಮಾಡಿಕೊಂಡಿದ್ದ 6 ವರ್ಷಗಳ ಒಡಂಬಡಿಕೆ ಅವಧಿಯು ದಿ : 14.03.2022 ಕ್ಕೆ ಅಂತ್ಯಗೊಂಡಿರುತ್ತದೆ .
ಕೇಂದ್ರ ಕಛೇರಿಯ ಸುತ್ತೋಲೆ ಸಂ:ಉಕೃನಿ /ಕೃಯಾಂ&ಸೂನೀ/ಕೃಯಂಧಾರೆ/ಕೈಬಿಸಂ /2021-22/2023-24, ದಿ : 19.07.23 & 02.01.23 ರನ್ವಯ ಒಡಂಬಡಿಕೆ ಅವಧಿಯು ಅಂತ್ಯಗೊಂಡಿರುವ ಕೃಷಿ ಯಂತ್ರಧಾರೆ ಆಸಕ್ತ ಎಫ್ಪಿಓ /ಇತರೆ ಸಂಸ್ಥೆಗಳಿಗೆ ಹಸ್ತಾಂತರಿಸುವ ಕುರಿತು ನಿಯಮಾನುಸಾರ ಕ್ರಮವಹಿಸಲು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ , ಹಾಸನ ರವರ ಅಧ್ಯಕ್ಷತೆಯಲ್ಲಿ ದಿ : 15.9.23 & 31.1.24 ರಂದು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ . ಹಸ್ತಾಂತರ ಕುರಿತಂತೆ ಹೆಚ್ಚಿನ ಪ್ರಚಾರ ಕೈಗೊಳ್ಳಲಾಗಿದ್ದು , ಸದರಿ ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ದಾಸ್ತಾನೀರಿಸಿದ್ದ ಯಂತ್ರೋಪಕರಣಗಳು ಉಪಯೋಗಿಸುವ ಸ್ಥಿತಿಯಲ್ಲಿ ಇಲ್ಲದ ಕಾರಣ ಯಾವುದೇ ಸಂಘ ಸಂಸ್ಥೆಗಳು / ಎಫ್ ಪಿ ಓ ಗಳಿಂದ ಪ್ರಸ್ತಾವನೆಗಳು ಸ್ವೀಕೃತಗೊಂಡಿರುವುದಿಲ್ಲ . ಪ್ರಸ್ತಾವನೆಗಳು ಸ್ವೀಕೃತಗೊಂಡ ನಂತರ ಹಸ್ತಾಂತರ ಕುರಿತಂತೆ ಕ್ರಮವಹಿಸಲಾಗುವುದೆಂದು ಯೋಜನೆಯ ಸದಸ್ಯ ಕಾರ್ಯದರ್ಶಿಗಳು ಹಾಗು ಸಹಾಯಕ ಕೃಷಿ ನಿರ್ದೇಶಕರು , ಹೊಳೆನರಸೀಪುರ ರವರು ವರದಿ ಸಲ್ಲಿಸಿರುತ್ತಾರೆ .</td>
</tr>
<tr>
<td>ಋ</td>
<td>ಈ ತಾಲ್ಲೂಕಿನ ಕಸಬಾ ಮತ್ತು ಹಳೆಕೋಟೆ ಹೋಬಳಿಗಳಲ್ಲಿ ಒಟ್ಟು 8 ಕೃಷಿ ಅಧಿಕಾರಿ / ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆ ಮಂಜೂರಾಗಿದ್ದು , ಹುದ್ದೆಗಳು ಖಾಲಿ ಇರುವುದರಿಂದ ರೈತರಿಗೆ ಮತ್ತು ಸರ್ಕಾರಿ ಕೆಲಸಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)</td>
<td>ಕೃಷಿ ಇಲಾಖೆಯ ಹೊಳೆನರಸೀಪುರ ತಾಲ್ಲೂಕಿನ ಕಸಬಾ ಮತ್ತು ಹಳೆಕೋಟೆ ಹೋಬಳಿಗಳಲ್ಲಿ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ವೃಂದದಲ್ಲಿರುವ ಮಂಜೂರು, ಭರ್ತಿ ಮತ್ತು ಖಾಲಿ ಹುದ್ದೆಗಳ ಮಾಹಿತಿ ಕೆಳಕಂಡಂತಿವೆ .
<table>
<tr><th>ಕ್ ರ. ಸಂ</th><th>ರೈತ ಸಂಪರ್ಕ ಕೇಂದ್ರ</th><th>ಹುದ್ದೆ</th><th>ಮಂ ಜೂರು</th><th>ಭರ್ತ ಿ</th><th>ಖಾಲಿ</th></tr>
<tr><td rowspan="2">1</td><td rowspan="2">ಕಸಬಾ</td><td>ಕೃಷಿ ಅಧಿಕಾರಿ</td><td>2</td><td>0</td><td>2</td></tr>
<tr><td>ಸಹಾಯಕ ಕೃಷಿ ಅಧಿಕಾರಿ</td><td>2</td><td>0</td><td>2</td></tr>
<tr><td rowspan="2">2</td><td rowspan="2">ಹಳೇ ಕೋಟೆ</td><td>ಕೃಷಿ ಅಧಿಕಾರಿ</td><td>1</td><td>0</td><td>1</td></tr>
<tr><td>ಸಹಾಯಕ ಕೃಷಿ ಅಧಿಕಾರಿ</td><td>3</td><td>0</td><td>3</td></tr>
<tr><td colspan="2"></td><td>ಕೃಷಿ ಅಧಿಕಾರಿ</td><td>4</td><td>0</td><td>4</td></tr>
</table>
</td>
</tr>
</table>

<table>
<tr>
<td></td>
<td></td>
<td>
<table>
<tr><td>ಒಟ್ಟು</td><td>ಸಹಾಯಕ ಕೃಷಿ ಅಧಿಕಾರಿ</td><td>4</td><td>0</td><td>4</td></tr>
</table>
ಸರ್ಕಾರದ ಪತ್ರ ಸಂಖ್ಯೆ : AGRI/245/AGS/2024, ದಿನಾಂಕ 06.02.2024 ರಲ್ಲಿ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ವೃಂದದಲ್ಲಿ ಕೆಳಕಂಡಂತೆ ನೇರ ನೇಮಕಾತಿ ಕೋಟಾದಡಿ ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಅನುಮತಿ ನೀಡಲಾಗಿದ್ದು , ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ .
<table>
<tr><td>ವೃಂದಗಳು</td><td>ಹುದ್ದೆಗಳ ಸಂಖ್ಯೆ</td></tr>
<tr><td>ಕೃಷಿ ಅಧಿಕಾರಿ</td><td>118</td></tr>
<tr><td>ಸಹಾಯಕ ಕೃಷಿ ಅಧಿಕಾರಿ</td><td>809</td></tr>
<tr><td>ಒಟ್ಟು</td><td>927</td></tr>
</table>
ಹೊರಗುತ್ತಿಗೆ /ಗುತ್ತಿಗೆ ಆಧಾರದ ಮೇಲೆ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿಯಲ್ಲಿ ಸಹಾಯಕ ತಾಂತ್ರಿಕರ ಸೇವೆಯನ್ನು ಹಾಗೂ ಆತ್ಮ ಯೋಜನೆಯಡಿಯಲ್ಲಿ ಉಪಯೋಜನಾ ನಿರ್ದೇಶಕರು , ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು ಮತ್ತು ಸಹಾಯಕ ತಾಂತ್ರಿಕ ವ್ಯವಸ್ಥಾಪಕರ ಸೇವೆಯನ್ನು ಪಡೆಯಲಾಗಿರುತ್ತದೆ . ಪ್ರತಿ ರೈತ ಸಂಪರ್ಕ ಕೇಂದ್ರಕ್ಕೆ ಒಬ್ಬರಂತೆ ದಾಸ್ತಾನು ನಿರ್ವಹಣಾ ಸಿಬ್ಬಂದಿಗಳ ಸೇವೆಯನ್ನು ಹಾಗೂ ಖಾಲಿ ಇರುವ ಹುದ್ದೆಗಳಿಗನುಗುಣವಾಗಿ ಬೆರಳಚ್ಚುಗಾರರು , ವಾಹನ ಚಾಲಕರು, ಡಿ ಇವರುಗಳ ಸೇವೆಯನ್ನು ಸಹ ಬಳಸಿಕೊಂಡು ಸಕಾಲದಲ್ಲಿ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿರುವುದರಿಂದ ಸಾರ್ವಜನಿಕರಿಗೆ / ಕೃಷಿಕರಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸಲಾಗುತ್ತಿದೆ .
</td>
</tr>
<tr>
<td>ಎ</td>
<td>ಹೊಳೆನರಸೀಪುರ ತಾ|| ಹಳೇಕೋಟೆ ಹೋಬಳಿಯ ರೈತ ಸಂಪರ್ಕ ಕೇಂದ್ರದ ಕಟ್ಟಡ ಶಿಥಿಲಾವಸ್ತೆಯಲ್ಲಿದ್ದು , ಕೃಷಿ ಪರಿಕರಗಳ ದಾಸ್ತಾನಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಳೆಕೋಟೆ ಹೋಬಳಿಯ ರೈತ ಸಂಪರ್ಕ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ ? (ಸಂಪೂರ್ಣ ಮಾಹಿತಿ ನೀಡುವುದು)</td>
<td>ಹೊಳೆನರಸೀಪುರ ತಾಲ್ಲೂಕು , ಹಳೇಕೋಟೆ ಹೋಬಳಿಯ ನೂತನ ರೈತ ಸಂಪರ್ಕ ಕೇಂದ್ರದ ಕಟ್ಟಡ ನಿರ್ಮಾಣ ಕುರಿತು ಪ್ರಸ್ತುತ ಕಂದಾಯ ಇಲಾಖೆಯಿಂದ ಮಂಜೂರಾಗಿರುವ ನಿವೇಶನ 38*38*230 ಅಡಿ ಇದ್ದು , ತ್ರಿಕೋನಾಕೃತಿಯಲ್ಲಿರುವ ಕಾರಣ ಪ್ರಸ್ತುತ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರ ನಿರ್ಮಾಣಕ್ಕೆ ಅನುಮೋದನೆಯಾಗಿರುವ ಯಾವುದೇ TYPE DESIGN ನಲ್ಲಿಯೂ ಸಹ , ರೈತ ಸಂಪರ್ಕ ಕೇಂದ್ರದ ನಿರ್ಮಾಣ ಮಾಡಲು ಸಾಧ್ಯವಾಗದ ಕಾರಣ 100*100 ಅಡಿ ಅಳತೆಯ ಬೇರೆ ನಿವೇಶನ ಮಂಜೂರು ಮಾಡಲು ಕೋರಿ ಸಹಾಯಕ ಕೃಷಿ ನಿರ್ದೇಶಕರು , ರವರು ತಹಶೀಲ್ದಾರ್ , ಹೊಳೆನರಸೀಪುರ ರವರನ್ನು ಪತ್ರ ಸಂಖ್ಯೆ :ಸಕೃನಿಹೊ /ಕನಿ /2023-24 ದಿನಾಂಕ : 20.12.2023 ರನ್ವಯ ಕೋರಿರುತ್ತಾರೆ .
ರೈತ ಸಂಪರ್ಕ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ನಿವೇಶನ ಮಂಜೂರಾದ ನಂತರ RIDF ಅಥವಾ ಇಲಾಖೆಯ ಯೋಜನೆಗಳಡಿ ಅಥವಾ ಜಿಲ್ಲಾ ಪಂಚಾಯತಿ ಯೋಜನೆಗಳಡಿಯಲ್ಲಿ ಅನುದಾನದ ಲಭ್ಯತೆಯ ಅನುಗುಣವಾಗಿ ಕೈಗೊಳ್ಳಲು ಕ್ರಮವಹಿಸಲಾಗುವುದು .</td>
</tr>
</table>